http://www.howtoexam.com

**Code No. 35**

Total No. of Questions : 40 ] [ Total No. of Printed Pages : 16

**June/July, 2009**

# MATHEMATICS

( Kannada and English Versions )

Time : 3 Hours 15 Minutes ] [ Max. Marks : 100

( Kannada Version )

HowToExam.com

***ಸೂಚನೆ :*** i) ಈ ಪ್ರಶ್ನೆ ಪತ್ರಿಕೆಯಲ್ಲಿ **A, B, C, D** ಮತ್ತು **E** ಎಂಬ ನಾಲ್ಕು ವಿಭಾಗಗಳಿವೆ. ಎಲ್ಲಾ ವಿಭಾಗಗಳನ್ನು ಉತ್ತರಿಸಿ.

ii) ವಿಭಾಗ – **A** ಗೆ 10 ಅಂಕಗಳು, ವಿಭಾಗ – **B** ಗೆ 20 ಅಂಕಗಳು, ವಿಭಾಗ – **C** ಗೆ 40 ಅಂಕಗಳು, ವಿಭಾಗ – **D** ಗೆ 20 ಅಂಕಗಳು ಮತ್ತು ವಿಭಾಗ – **E** ಗೆ 10 ಅಂಕಗಳಿರುತ್ತವೆ.

## ವಿಭಾಗ – A

ಈ ಕೆಳಗಿನ ಎಲ್ಲಾ **ಹತ್ತು** ಪ್ರಶ್ನೆಗಳನ್ನು ಉತ್ತರಿಸಿ : $10 \times 1 = 10$

1. $3x \equiv 2 \pmod 6$ ಸಮಶೇಷೀಯತೆಗೆ ಪರಿಹಾರವಿಲ್ಲ. ಏಕೆ ?

2. $\vec{a}$ ಯ ಡೈರೆಕ್ಷನ್ ಕೊಸೈನ್‌ಗಳು ( Direction cosines ) $\frac{1}{3}$ , $\frac{2}{3}$ ಮತ್ತು $n$ ಗಳಾದರೆ $n$ ನ ಬೆಲೆಯನ್ನು ಕಂಡುಹಿಡಿಯಿರಿ.

3. ಪೂರ್ಣಾಂಕಗಳ ಗಣ $I$ ಯಲ್ಲಿ $*$ ಕ್ರಿಯೆಯ ವ್ಯಾಖ್ಯೆ $a * b = a^b$ , $\forall\ a, b \in I$ ಆಗಿದೆ. ಈ ಕ್ರಿಯೆಯು ದ್ವಿಮಾನ ಕ್ರಿಯೆಯೇ ಅಥವಾ $I$ ಮೇಲಿಲ್ಲವೇ ಎಂದು ಪರೀಕ್ಷಿಸಿ.

[ Turn over

Previous year old exam question papers and there answers available for free

http://www.howtoexam.com



4. $A, B$ ಗಳು ಒಂದೇ ಪರಿಮಾಣ ( Order ) ಇರುವ ಎರಡು ವರ್ಗ ಮಾತೃಕೆಗಳು. $|A| = 4$, $|B| = 5$ ಆದರೆ, $|AB|$ ಯನ್ನು ಕಂಡುಹಿಡಿಯಿರಿ.

5. ಎರಡು ವೃತ್ತಗಳ ಕೇಂದ್ರಗಳ ನಡುವಣ ದೂರ $d$ ಆಗಿದ್ದು, $r_1$ , $r_2$ ಗಳು ತ್ರಿಜ್ಯಗಳಾಗಿದ್ದರೆ, ಆ ವೃತ್ತಗಳು ಒಂದನ್ನೊಂದು ಬಾಹ್ಯ ಸ್ಪರ್ಶವಾಗಬೇಕಾದ ( External touch ) ನಿಬಂಧನೆಯನ್ನು ( Condition ) ಬರೆಯಿರಿ.

6. $4x^2 + 9y^2 = 36$ ರ ಮೇಲಿರುವ ಯಾವುದೇ ಬಿಂದುವಿನ ನಾಭಿ ದೂರಗಳ ಮೊತ್ತವನ್ನು ಕಂಡುಹಿಡಿಯಿರಿ.

7. $\sin^{-1}(\sin 130°)$ ಯ ಬೆಲೆಯನ್ನು ಕಂಡುಹಿಡಿಯಿರಿ.

8. $\left(\frac{1-i}{1+i}\right)^n = 1$ ಆಗುವಂತೆ $n$ ನ ಕನಿಷ್ಠ ಧನ ಪೂರ್ಣಾಂಕ ಬೆಲೆಯನ್ನು ಕಂಡುಹಿಡಿಯಿರಿ.

9. ಉತ್ಪನ್ನ $f(x) = |x|$ ಆಗಿದ್ದರೆ, $Lf'(0)$ ಕಂಡುಹಿಡಿಯಿರಿ.

10. $\int_{-\pi/4}^{\pi/4} (\sin^3 x + \cos x)\, dx$ ನ ಬೆಲೆಯನ್ನು ಕಂಡುಹಿಡಿಯಿರಿ.

## ವಿಭಾಗ – B

ಈ ಕೆಳಗಿನವುಗಳಲ್ಲಿ ಯಾವುದಾದರೂ **ಹತ್ತು** ಪ್ರಶ್ನೆಗಳನ್ನು ಉತ್ತರಿಸಿ : $10 \times 2 = 20$

11. $ca \equiv cb \pmod m$ ಆಗಿದ್ದು $c, m$ ಗಳು ಸಾಪೇಕ್ಷ ಅವಿಭಾಜ್ಯ ಸಂಖ್ಯೆಗಳಾದರೆ $a \equiv b \pmod m$ ಎಂದು ಸಾಧಿಸಿ.

12. $A = \begin{bmatrix} \cos\theta & \sin\theta \\ -\sin\theta & \cos\theta \end{bmatrix}$ ಆದಾಗ, $AA'$ ಯು ಸಮಮಿತಿ ( Symmetric ) ಮಾತೃಕೆಯೇ ಎಂದು ಪರೀಕ್ಷಿಸಿ.

Previous year old exam question papers and there answers available for free

http://www.howtoexam.com



13. ಅರೆಸಂಕುಲವನ್ನು ವ್ಯಾಖ್ಯಾನಿಸಿ. 'ಸಂಕಲನ ಮಾಡ್ಯುಲೋ 5' $( +_5 )$ ಕ್ರಿಯೆಯಲ್ಲಿ $\{ 1, 2, 3, 4 \}$ ಗಣವು ಅರೆಸಂಕುಲವೇ ಎಂದು ಪರೀಕ್ಷಿಸಿ.

14. $Q^+$ (ಧನ ಭಾಗಲಬ್ಧ ಸಂಖ್ಯೆಗಳ ಗಣ) ಗಣದಲ್ಲಿ $*$ ಎಂಬ ಕ್ರಿಯೆಯ ವ್ಯಾಖ್ಯೆ $a * b = \frac{ab}{3}$, $\forall\ a, b \in Q^+$ ಆಗಿದೆ. ಅನನ್ಯತಾಂಶ ಮತ್ತು $Q^+$ ನಲ್ಲಿ $a^{-1}$ ನ್ನು ಕಂಡುಹಿಡಿಯಿರಿ.

15. $\lambda\hat{i} + \hat{j} + 2\hat{k}$, $2\hat{i} - 3\hat{j} + 4\hat{k}$ ಮತ್ತು $\hat{i} + 2\hat{j} - \hat{k}$ ಗಳು ಸಮತಲ ಸದಿಶಗಳಾಗಿದ್ದರೆ ( Coplanar vectors ), $\lambda$ ದ ಬೆಲೆಯನ್ನು ಕಂಡುಹಿಡಿಯಿರಿ.

16. ( 0, 0 ), ( 3, 0 ) ಮತ್ತು ( 0, 4 ) ಗಳು ಶೃಂಗಗಳಾಗಿರುವ ತ್ರಿಭುಜದ ಪರಿವೃತ್ತದ ಸಮೀಕರಣವನ್ನು ಕಂಡುಹಿಡಿಯಿರಿ.

17. ಬಿಡಿಸಿ : $\tan^{-1} x = \sin^{-1}\frac{1}{\sqrt{2}} - \cot^{-1}\frac{1}{3}$ .

18. $5e^{i \tan^{-1}\frac{4}{3}}$ ಎಂಬ ಸಂಖ್ಯೆಯ ವಾಸ್ತವ ( Real ) ಮತ್ತು ಊಹ್ಯ ( Imaginary ) ಭಾಗಗಳು ಕ್ರಮವಾಗಿ 3, 4 ಎಂದು ತೋರಿಸಿ.

19. $y = \sin^{-1}\left(\frac{\sqrt{x} - 1}{\sqrt{x} + 1}\right) + \sec^{-1}\left(\frac{\sqrt{x} + 1}{\sqrt{x} - 1}\right)$ ಆದರೆ, $\frac{dy}{dx} = 0$ ಎಂದು ಸಾಧಿಸಿ.

20. $x^m y^n = a^{m+n}$ ಎಂಬ ವಕ್ರರೇಖೆಯ ಯಾವುದೇ ಬಿಂದುವಿನಲ್ಲಿ ಎಳೆದ ಉಪಸ್ಪರ್ಶಕವು ಬಿಂದುವಿನ ಭುಜವಾಗಿ ( Abscissa ) ಬದಲಾಗುತ್ತದೆ ಎಂದು ಸಾಧಿಸಿ.

21. $\int [ \sin ( \log x ) + \cos ( \log x ) ]\, dx$ ನ ಬೆಲೆಯನ್ನು ಕಂಡುಹಿಡಿಯಿರಿ.

22. $y$-ಅಕ್ಷವನ್ನು ಮೂಲಬಿಂದುವಿನಲ್ಲಿ ( Origin ) ಸ್ಪರ್ಶಿಸುವ ವೃತ್ತಗಳ ಅವಕಲ ಸಮೀಕರಣವನ್ನು ( Differential equation ) ಪಡೆಯಿರಿ.



Previous year old exam question papers and there answers available for free

http://www.howtoexam.com



## ವಿಭಾಗ – C

I. ಈ ಕೆಳಗಿನವುಗಳಲ್ಲಿ ಯಾವುದಾದರೂ **ಮೂರು** ಪ್ರಶ್ನೆಗಳನ್ನು ಉತ್ತರಿಸಿ : $3 \times 5 = 15$

23. a) $a, b$ ಪೂರ್ಣಾಂಕಗಳ ಮ.ಸಾ.ಅ. ( GCD ) ವನ್ನು ವ್ಯಾಖ್ಯಾನಿಸಿ. 275 ಮತ್ತು 726 ರ ಮ.ಸಾ.ಅ. ಕಂಡುಹಿಡಿಯಿರಿ. 3

b) 252 ನ್ನು ಅವಿಭಾಜ್ಯ ಸಂಖ್ಯೆಗಳ ಗುಣಲಬ್ಧವನ್ನಾಗಿ ಬರೆದು ಅದರ ಧನ ಭಾಜಕಗಳೆಷ್ಟು ಎಂದು ಕಂಡುಹಿಡಿಯಿರಿ. 2

24. ಕೋಶ ಪದ್ಧತಿಯ ವಿಧಾನದಿಂದ ಬಿಡಿಸಿ : $2x - y = 10$

$$x - 2y = 2$$

ಇಲ್ಲಿರುವ ಸಹಾಂಕಗಳ ಕೋಶವು ಕ್ಯಾಲಿ-ಹ್ಯಾಮಿಲ್ಟನ್ ಪ್ರಮೇಯವನ್ನು ತೃಪ್ತಿಗೊಳಿಸುತ್ತದೆ ( Satisfies ) ಎಂದು ಪರೀಕ್ಷಿಸಿ. 5

25. $\forall\, a, b \in H,\ ab^{-1} \in H$ ಆದಾಗ, $G$ ಸಂಕುಲದ ಶೂನ್ಯವಲ್ಲದ ಉಪಗಣವಾದ $H$ ಗಣವು $G$ ಯ ಉಪಸಂಕುಲವೆಂದು ಸಾಧಿಸಿ. ಇದನ್ನು ಉಪಯೋಗಿಸಿ $H$ ಮತ್ತು $K$ ಗಳು $G$ ಯ ಉಪಸಂಕುಲಗಳಾದರೆ $H \cap K$ ಕೂಡಾ $G$ ಯ ಉಪಸಂಕುಲವೆಂದು ಸಾಧಿಸಿ. 5

26. a) $\vec{a} = 2\hat{i} + \hat{j} + \hat{k}$, $\vec{b} = \hat{i} + 2\hat{j} - \hat{k}$ ಎಂದು ಕೊಟ್ಟಾಗ $\vec{a}$ ಗೆ ಲಂಬವಾಗಿರುವ ಮತ್ತು $\vec{a}$ , $\vec{b}$ ಗಳ ಸಮತಲದಲ್ಲಿರುವ ( coplanar with $\vec{a}$ and $\vec{b}$ ) ಘಟಕ ಸದಿಶ ( Unit vector ) ವನ್ನು ಕಂಡುಹಿಡಿಯಿರಿ. 3

b) $\vec{a} + \vec{b} + \vec{c} = \vec{0}$ ಆದರೆ,

$\vec{a} \times \vec{b} = \vec{b} \times \vec{c} = \vec{c} \times \vec{a}$ ಎಂದು ಸಾಧಿಸಿ. 2

Previous year old exam question papers and there answers available for free

http://www.howtoexam.com



II. ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ : $2 \times 5 = 10$

27. a) $x^2 + y^2 + 2g_1 x + 2f_1 y + c_1 = 0$ ಮತ್ತು $x^2 + y^2 + 2g_2 x + 2f_2 y + c_2 = 0$ ವೃತ್ತಗಳು ಲಂಬವಾಗಿ ಛೇದಿಸುವ ನಿಬಂಧನೆಯನ್ನು ನಿರೂಪಿಸಿ. 3

b) ಮೂರು ವೃತ್ತಗಳ ಮೂಲಾಕ್ಷ ಕೇಂದ್ರವು ( 1, 2 ) ಆಗಿದೆ. ಒಂದು ವೃತ್ತದ ಸಮೀಕರಣವು $x^2 + y^2 - 2x + 3y = 0$ ಆಗಿದ್ದರೆ, ಈ ಕೇಂದ್ರವು ವೃತ್ತಗಳ ಒಳಗೆ ಅಥವಾ ಹೊರಗೆ ಇದೆಯೇ ಎಂದು ಪರೀಕ್ಷಿಸಿ. 2

28. a) $9x^2 + 4y^2 - 18x + 16y - 11 = 0$ ಯ ಕೇಂದ್ರ ಮತ್ತು ಅದರ ಸಹಾಯಕ ( Auxiliary ) ವೃತ್ತದ ವಿಸ್ತೀರ್ಣವನ್ನು ಕಂಡುಹಿಡಿಯಿರಿ. 3

b) ಪರವಲಯ $x = 2t^2$, $y = 4t$ ಯ ನಿಯತದ ( Directrix ) ಸಮೀಕರಣವನ್ನು ಕಂಡುಹಿಡಿಯಿರಿ. 2

29. a) $\sin^{-1} x + \sin^{-1} y + \sin^{-1} z = \frac{\pi}{2}$ ಆದಾಗ $x^2 + y^2 + z^2 + 2xyz = 1$ ಎಂದು ಸಾಧಿಸಿ. 3

b) $\tan 2\theta \tan \theta = 1$ ಸಮೀಕರಣದ ಸಾಮಾನ್ಯ ಪರಿಹಾರವನ್ನು ಕಂಡುಹಿಡಿಯಿರಿ. 2

III. ಈ ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ : $3 \times 5 = 15$

30. a) ಮೂಲತತ್ವದಿಂದ $x$ ಗೆ ಸಂಬಂಧಿಸಿದಂತೆ $\sin 2x$ ನ್ನು ನಿಷ್ಪನ್ನಿಸಿ ( Differentiate ). 3

b) $x$ ಗೆ ಸಂಬಂಧಿಸಿದಂತೆ ನಿಷ್ಪನ್ನಿಸಿ : $(\sin x)^{\log x}$ 2

31. a) $\cos^{-1}(4x^3 - 3x)$ ಉತ್ಪನ್ನವನ್ನು $\cos^{-1}(1 - 2x^2)$ ಗೆ ಸಂಬಂಧಿಸಿದಂತೆ ನಿಷ್ಪನ್ನಿಸಿ. 3

b) ವಕ್ರರೇಖೆಗಳಾದ $y = 6 + x - x^2$ ಮತ್ತು $y(x - 1) = x + 2$ ಗಳು ( 2, 4 ) ಬಿಂದುವಿನಲ್ಲಿ ಸ್ಪರ್ಶಿಸುತ್ತವೆ ಎಂದು ತೋರಿಸಿ. 2

[ Turn over

HowToExam.com

Previous year old exam question papers and there answers available for free

http://www.howtoexam.com



32. a) $y = \sin(m \cos^{-1} x)$ ಆದರೆ,

$(1 - x^2) y_2 - xy_1 + m^2 y = 0$ ಎಂದು ಸಾಧಿಸಿ. 3

b) $\int \frac{1}{x(x^5 + 1)}$ dx ನ ಬೆಲೆಯನ್ನು ಕಂಡುಹಿಡಿಯಿರಿ. 2

33. a) $x$ ಗೆ ಸಂಬಂಧಿಸಿದಂತೆ ಅನುಕಲಿಸಿ ( Integrate ) :

$$\frac{\sin x + 18 \cos x}{3 \sin x + 4 \cos x}$$ 3

b) $\int \sqrt{\frac{1 - x}{1 + x}}$ dx ನ ಬೆಲೆಯನ್ನು ಕಂಡುಹಿಡಿಯಿರಿ. 2

34. ಅನುಕಲನ ( Integration ) ವಿಧಾನದಿಂದ $x^2 + y^2 = 6$ ವೃತ್ತದ ವಿಸ್ತೀರ್ಣವನ್ನು ಕಂಡುಹಿಡಿಯಿರಿ. 5

## ವಿಭಾಗ – D

ಈ ಕೆಳಗಿನ ಯಾವುದಾದರೂ **ಎರಡು** ಪ್ರಶ್ನೆಗಳನ್ನು ಉತ್ತರಿಸಿ : $2 \times 10 = 20$

35. a) $y = mx + c$ ಸರಳರೇಖೆಯು $\frac{x^2}{a^2} - \frac{y^2}{b^2} = 1$ ಅತಿಪರವಲಯಕ್ಕೆ ಸ್ಪರ್ಶಕವಾಗಲು ನಿಬಂಧನೆಯನ್ನು ನಿರೂಪಿಸಿ ( Derive ). ಇದಲ್ಲದೆ ಸ್ಪರ್ಶಬಿಂದುವನ್ನು ಕಂಡುಹಿಡಿಯಿರಿ. ನಿಬಂಧನೆಯನ್ನು ಉಪಯೋಗಿಸಿ $x - y + 5 = 0$ ರೇಖೆಗೆ ಸಮಾಂತರವಾಗುವಂತೆ $\frac{x^2}{16} - \frac{y^2}{12} = 1$ ಕ್ಕೆ ಸ್ಪರ್ಶಕಗಳ ಸಮೀಕರಣಗಳನ್ನು ಕಂಡುಹಿಡಿಯಿರಿ. 6

b) $\begin{vmatrix} 1 & a & a^2 + bc \\ 1 & b & b^2 + ca \\ 1 & c & c^2 + ab \end{vmatrix} = 2(a - b)(b - c)(c - a)$ ಎಂದು ಸಾಧಿಸಿ. 4

Previous year old exam question papers and there answers available for free

http://www.howtoexam.com



36. a) ಡಿ ಮೋಯ್ವ್ರರ್‌ನ ಪ್ರಮೇಯವನ್ನು ವಿವರಿಸಿ. ಘಾತವು ಧನ, ಋಣ ಪೂರ್ಣಾಂಕಗಳಾಗಿರುವಾಗ ಈ ಪ್ರಮೇಯವನ್ನು ಸಾಧಿಸಿ. ಇದನ್ನು ಉಪಯೋಗಿಸಿ $Z = \cos\theta + i\sin\theta$ ಆದಾಗ $\frac{Z^{10}-1}{Z^{10}+1} = i\tan 5\theta$ ಎಂದು ಸಾಧಿಸಿ. 6

b) $\cos 2\theta = \sqrt{2}(\cos\theta - \sin\theta)$ ಸಮೀಕರಣದ ಸಾಮಾನ್ಯ ಪರಿಹಾರವನ್ನು ಕಂಡುಹಿಡಿಯಿರಿ. 4

37. a) ಒಂದು ಗೋಳದ ಘನಫಲವು ಹೆಚ್ಚುವ ದರ $4\pi$ c.c./sec. ಆಗಿದೆ. ಘನಫಲವು $288\pi$ ಆದಾಗ ತ್ರಿಜ್ಯ, ಮೇಲ್ಮೈ ವಿಸ್ತೀರ್ಣಗಳು ಹೆಚ್ಚುವ ದರಗಳನ್ನು ಕಂಡುಹಿಡಿಯಿರಿ. ಇದಲ್ಲದೆ

(i) 5 ಸೆಕೆಂಡುಗಳಲ್ಲಿ ಘನಫಲದಲ್ಲಿ ಆಗುವ ವ್ಯತ್ಯಾಸ ಮತ್ತು (ii) ಘನಫಲ $288\pi$ ಆದಾಗ ತ್ರಿಜ್ಯಕ್ಕೆ ಸಂಬಂಧಿಸಿದಂತೆ ಘನಫಲವು ಹೆಚ್ಚುವ ದರಗಳನ್ನು ಕಂಡುಹಿಡಿಯಿರಿ. 6

b) $(1, 5)$ ಮತ್ತು $(1, 1)$ ಬಿಂದುಗಳು ನಾಭಿ ಲಂಬಗಳಾಗಿರುವ ಪರವಲಯದ ಸಮೀಕರಣಗಳನ್ನು ಕಂಡುಹಿಡಿಯಿರಿ. 4

38 a) $\int_0^{\pi} \frac{x\,dx}{a^2\cos^2 x + b^2\sin^2 x} = \frac{\pi^2}{2ab}$ ಎಂದು ಸಾಧಿಸಿ. 6

b) $xy(1+x^2)\frac{dy}{dx} - y^2 = 1$ ರ ಅವಕಲ ಸಮೀಕರಣದ ನಿರ್ದಿಷ್ಟ ( Particular ) ಪರಿಹಾರವನ್ನು ಕಂಡುಹಿಡಿಯಿರಿ : $x = 1, y = 0$ ಎಂದು ಕೊಟ್ಟಿದೆ. 4

## ವಿಭಾಗ – E

ಈ ಕೆಳಗಿನ ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ : $1 \times 10 = 10$

39. a) $|\vec{a} + \vec{b} + \vec{c}| = |\vec{a} + \vec{b} - \vec{c}|$ ಆದರೆ, $\vec{a} + \vec{b}$ ಮತ್ತು $\vec{c}$ ಗಳ ನಡುವಣ ಕೋನವನ್ನು ಕಂಡುಹಿಡಿಯಿರಿ. 4

[ Turn over

Previous year old exam question papers and there answers available for free

http://www.howtoexam.com



b) ಒಂದು ನಿರ್ದಿಷ್ಟ ಅಳತೆಯ ವಿಕರ್ಣವಿರುವ ಎಲ್ಲಾ ಲಂಬಕೋನ ತ್ರಿಭುಜಗಳಲ್ಲಿ ಸಮದ್ವಿಬಾಹು ತ್ರಿಭುಜದ ವಿಸ್ತೀರ್ಣವು ಗರಿಷ್ಠವಾಗಿರುತ್ತದೆ ಎಂದು ಸಾಧಿಸಿ. 4

c) $\left( 16 \, cis \frac{\pi}{2} \right)^{\frac{1}{4}}$ ಕಂಡುಹಿಡಿಯಿರಿ. 2

40\. a) $2^{150} \times 3^{12} \times 135 \equiv a \pmod 7$ ಆದರೆ, $a$ ಯನ್ನು 7 ರಿಂದ ಭಾಗಿಸುವಾಗ ಸಿಗುವ ಕನಿಷ್ಠ ಧನ ಶೇಷವನ್ನು ಕಂಡುಹಿಡಿಯಿರಿ. 4

b) $2(x^2 + y^2) - 12x - 4y + 10 = 0$ ಮತ್ತು $x^2 + y^2 + 5x - 13y + 16 = 0$ ವೃತ್ತಗಳ 'ಸಾಮಾನ್ಯ ಜ್ಯಾ'ದ ಉದ್ದವನ್ನು ಕಂಡುಹಿಡಿಯಿರಿ. 4

c) $\int_0^2 \frac{\sqrt{x}}{\sqrt{2-x} + \sqrt{x}} \, dx$ ನ ಬೆಲೆಯನ್ನು ಕಂಡುಹಿಡಿಯಿರಿ. 2

HowToExam.com

Previous year old exam question papers and there answers available for free

http://www.howtoexam.com



**( English Version )**

*Instructions :* i) The question paper has *five* **Parts – A, B, C, D** and **E.** Answer all the Parts.

ii) **Part – A** carries 10 marks, **Part – B** carries 20 marks, **Part – C** carries 40 marks, **Part – D** carries 20 marks and **Part – E** carries 10 marks.

## PART – A

Answer *all* the *ten* questions : $10 \times 1 = 10$

1. $3x \equiv 2$ ( mod 6 ) has no solution. Why ?

2. If direction cosines of $\vec{a}$ are $\frac{1}{3}$ , $\frac{2}{3}$ and $n$, find $n$.

3. On $I$ ( the set of all integers ), and operation $*$ is defined by $a * b = a^b$, $\forall\ a, b \in I$. Examine whether $*$ is binary or not on $I$.

4. $A$ and $B$ are square matrices of the same order and $|A| = 4$, $|B| = 5$. Find $|AB|$.

5. Given two circles with radii $r_1$ , $r_2$ and having $d$ as the distance between their centres, write the condition for them to touch each other externally.

6. Find the sum of the focal distances of any point on $4x^2 + 9y^2 = 36$.

7. Evaluate $\sin^{-1}(\sin 130°)$ .

[ Turn over

Previous year old exam question papers and there answers available for free

http://www.howtoexam.com



8. Find the least positive integer $n$ for which $\left( \frac{1 - i}{1 + i} \right)^n = 1$.

9. Given the function $f(x) = |x|$, find $Lf'(0)$.

10. Evaluate $\int_{-\pi/4}^{\pi/4} (\sin^3 x + \cos x) \, dx$.

## PART – B

Answer any *ten* questions : 10 × 2 = 20

11. If $ca \equiv cb \pmod{m}$ and $c$, $m$ are relatively prime then prove that $a \equiv b \pmod{m}$

12. For the matrix $A = \begin{bmatrix} \cos\theta & \sin\theta \\ -\sin\theta & \cos\theta \end{bmatrix}$, verify that $AA'$ is symmetric.

13. Define a semigroup. Examine whether $\{1, 2, 3, 4\}$ is a semigroup under 'addition modulo 5' $(+_5)$.

14. On $Q^+$ ( set of all +ve rationals ) , an operation $*$ is defined by $a * b = \frac{ab}{3}$ , $\forall\, a, b \in Q^+$. Find the identity element and $a^{-1}$ in $Q^+$ .

15. If $\lambda\hat{i} + \hat{j} + 2\hat{k}$, $2\hat{i} - 3\hat{j} + 4\hat{k}$ and $\hat{i} + 2\hat{j} - \hat{k}$ are coplanar, find $\lambda$.

16. Find the equation of the circumcircle of the triangle formed by ( 0, 0 ), ( 3, 0 ) & ( 0, 4 ).

Previous year old exam question papers and there answers available for free

http://www.howtoexam.com



17. Solve $\tan^{-1} x = \sin^{-1} \frac{1}{\sqrt{2}} - \cot^{-1} \frac{1}{3}$ .

18. Show that the real and imaginary parts of $5e^{i \tan^{-1} \frac{4}{3}}$ are 3, 4 respectively.

19. If $y = \sin^{-1} \left( \frac{\sqrt{x} - 1}{\sqrt{x} + 1} \right) + \sec^{-1} \left( \frac{\sqrt{x} + 1}{\sqrt{x} - 1} \right)$ , prove that $\frac{dy}{dx} = 0$.

20. At any point on the curve $x^m y^n = a^{m+n}$ , show that the subtangent varies as the abscissa of the point.

21. Evaluate $\int [ \sin ( \log x ) + \cos ( \log x ) ] \, dx$.

22. Form the differential equation of the family of circles touching $y$-axis at origin.

**PART – C**

I. Answer any *three* questions : 3 × 5 = 15

23. a) Define GCD of two integers $a$ and $b$. Find the GCD of 275 and 726. 3

b) Find the number of positive divisors of 252 by writing it as the product of primes ( prime power factorisation ). 2

[ Turn over

Previous year old exam question papers and there answers available for free

http://www.howtoexam.com



24. Solve by matrix method : $2x - y = 10$

$x - 2y = 2$

Also, verify that the coefficient matrix of this system satisfies Cayley-Hamilton theorem. 5

25. Prove that a non-empty subset $H$ of a group $G$, is a subgroup of $G$, if $\forall\ a, b \in H,\ ab^{-1} \in H$. Hence prove that, if $H$ and $K$ are subgroups of a group $G$ then $H \cap K$ also, is a subgroup of $G$. 5

26. a) Given $\vec{a} = 2\hat{i} + \hat{j} + \hat{k}$, $\vec{b} = \hat{i} + 2\hat{j} - \hat{k}$, find a unit vector perpendicular to $\vec{a}$ and coplanar with $\vec{a}$ and $\vec{b}$. 3

b) If $\vec{a} + \vec{b} + \vec{c} = \vec{0}$, prove that $\vec{a} \times \vec{b} = \vec{b} \times \vec{c} = \vec{c} \times \vec{a}$. 2

II. Answer any *two* questions : $2 \times 5 = 10$

27. a) Derive the condition for the two circles

$x^2 + y^2 + 2g_1 x + 2f_1 y + c_1 = 0$ and

$x^2 + y^2 + 2g_2 x + 2f_2 y + c_2 = 0$ to cut each other orthogonally. 3

b) ( 1, 2 ) is the radical centre of three circles. One of the circles is $x^2 + y^2 - 2x + 3y = 0$. Examine whether the radical centre lies inside or outside all the circles. 2

Previous year old exam question papers and there answers available for free

http://www.howtoexam.com



28. a) Given the equation of the conic

$9x^2 + 4y^2 - 18x + 16y - 11 = 0$, find its centre and the area of its auxiliary circle. 3

b) Obtain the equation of the directrix of the parabola $x = 2t^2$, $y = 4t$. 2

29. a) If $\sin^{-1} x + \sin^{-1} y + \sin^{-1} z = \frac{\pi}{2}$, prove that

$x^2 + y^2 + z^2 + 2xyz = 1$. 3

b) Find the general solution of $\tan 2\theta \tan \theta = 1$. 2

III. Answer any *three* of the following questions : $3 \times 5 = 15$

30. a) Differentiate $\sin 2x$ w.r.t. $x$ from first principle. 3

b) Differentiate $( \sin x )^{\log x}$ w.r.t $x$. 2

31. a) Differentiate $\cos^{-1} ( 4x^3 - 3x )$ w.r.t. $\cos^{-1} ( 1 - 2x^2 )$. 3

b) Show that the curves $y = 6 + x - x^2$ and $y ( x - 1 ) = x + 2$ touch each other at ( 2, 4 ). 2

32. a) If $y = \sin ( m \cos^{-1} x )$, prove that

$( 1 - x^2 ) y_2 - xy_1 + m^2 y = 0$. 3

b) Evaluate $\int \frac{1}{x ( x^5 + 1 )} dx$. 2

[ Turn over

Previous year old exam question papers and there answers available for free

http://www.howtoexam.com



33. a) Integrate $\dfrac{\sin x + 18 \cos x}{3 \sin x + 4 \cos x}$ w.r.t. $x$. 3

b) Evaluate $\int \sqrt{\dfrac{1-x}{1+x}}\, dx$. 2

34. Find the area of $x^2 + y^2 = 6$ by integration. 5

**PART – D**

Answer any *two* of the following questions : $2 \times 10 = 20$

35. a) Derive a condition for $y = mx + c$ to be a tangent to the hyperbola $\dfrac{x^2}{a^2} - \dfrac{y^2}{b^2} = 1$. Also, find the point of contact. Using the condition derived, find the equations of tangents to $\dfrac{x^2}{16} - \dfrac{y^2}{12} = 1$, which are parallel to $x - y + 5 = 0$. 6

b) Prove that

$$\begin{vmatrix} 1 & a & a^2 + bc \\ 1 & b & b^2 + ca \\ 1 & c & c^2 + ab \end{vmatrix} = 2(a-b)(b-c)(c-a).$$ 4

36. a) State De Moivre's theorem. Prove it for positive and negative integral indices. Using it prove that $\dfrac{Z^{10} - 1}{Z^{10} + 1} = i \tan 5\theta$ if

$Z = \cos \theta + i \sin \theta$. 6

b) Find the general solution of $\cos 2\theta = \sqrt{2}\,(\cos \theta - \sin \theta)$. 4

Previous year old exam question papers and there answers available for free

http://www.howtoexam.com



37. a) The volume of a sphere increases at the rate of $4\pi$ c.c./sec. Find the rates of increase of its radius and surface area when its volume is $288\,\pi$ c.c. Also find (i) the change in volume in 5 secs, (ii) rate of increase of volume w.r.t. radius when the volume is $288\,\pi$ c.c. 6

b) Obtain the equations of parabolas having ( 1, 5 ) and ( 1, 1 ) as ends of the latus rectum. 4

38. a) Prove that $\int_0^{\pi} \frac{x\,dx}{a^2 \cos^2 x + b^2 \sin^2 x} = \frac{\pi^2}{2ab}$. 6

b) Find the particular solution of $xy\,(1 + x^2)\frac{dy}{dx} - y^2 = 1$, given that, when $x = 1$, $y = 0$. 4

**PART – E**

Answer any *one* of the following questions : $1 \times 10 = 10$

39. a) If $|\vec{a} + \vec{b} + \vec{c}| = |\vec{a} + \vec{b} - \vec{c}|$, find the angle between $\vec{a} + \vec{b}$ and $\vec{c}$. 4

b) Among all right-angled triangles of a given hypotenuse, show that the triangle which is isosceles has maximum area. 4

c) Find the fourth roots of $16\, cis\, \frac{\pi}{2}$. 2

[ Turn over

Previous year old exam question papers and there answers available for free

http://www.howtoexam.com



40. a) If $2^{150} \times 3^{12} \times 135 \equiv a \pmod 7$, find the least positive remainder when $a$ is divided by 7. 4

b) Given the circles $2(x^2 + y^2) - 12x - 4y + 10 = 0$ and $x^2 + y^2 + 5x - 13y + 16 = 0$, find the length of their common chord. 4

c) Evaluate $\displaystyle\int_0^2 \frac{\sqrt{x}}{\sqrt{2-x} + \sqrt{x}}\, dx$. 2

HowToExam.com

Previous year old exam question papers and there answers available for free